ದಿನಾಂಕ: 19-12-2019,

**ರಿಗೆ,**

**ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ**
**ಮುಖ್ಯಮಂತ್ರಿಗಳು,**
**ಕರ್ನಾಟಕ ಸರ್ಕಾರ**

ಮಾನ್ಯರೇ,

**ವಿಷಯ:– ವಸತಿ ಫಲಾನುಭವಿಗಳ ಆಯ್ಕೆಯ ಗ್ರಾಮ ಸಭೆಯ ಹಕ್ಕನ್ನು ಮೊಟಕುಗೊಳಿಸುವ ಸರ್ಕಾರದ ನಿರ್ಧಾರವು ಅಸಂವಿಧಾನಿಕವಾದ್ದರಿಂದ ತಕ್ಷಣ ಹಿಂಪಡೆಯುವ ಕುರಿತು**

**'ಅಕ್ರಮ ಎಸಗುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಮತ್ತು ಗ್ರಾಮ ಸಭೆಗಳು ತಯಾರಿಸುವ ಫಲಾನುಭವಿಗಳ ಪಟ್ಟಿಗೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್** ಸಿ.ಇ.ಓ. **ತಹಶೀಲ್ದಾರ್ ಹಾಗೂ ಶಾಸಕರ ಒಪ್ಪಿಗೆ ಪಡೆಯುವುದನ್ನು ಕಡ್ಡಾಯ ಮಾಡಲು ಕಾಯಿದೆಗೆ ತಿದ್ದುಪಡಿ ಮಾಡಲಾಗುವುದು'!** ಎಂದು ನಮ್ಮ ರಾಜ್ಯದ ವಸತಿ ಸಚಿವರಾದ ವಿ.ಸೋಮಣ್ಣ ಬುಧವಾರ (ದಿನಾಂಕ: 11–12–2019ರಂದು) ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು ಎಂದು ದಿನಾಂಕ: 12–12–2019ರ ಪ್ರಜಾವಾಣಿಯಲ್ಲಿ ಪ್ರಕಟವಾಗಿದೆ. ಅಲ್ಲದೇ ಈ ವಿಷಯ ಸುದ್ದಿವಾಹಿನಿಗಳಲ್ಲಿಯೂ ನಿನ್ನೆ ಬಿತ್ತರವಾಗಿದೆ.

**ವಸತಿ ಫಲಾನುಭವಿಗಳ ಆಯ್ಕೆಯ ಗ್ರಾಮ ಸಭೆಯ ಹಕ್ಕನ್ನು ಮೊಟಕುಗೊಳಿಸುವ, ಸ್ಥಳೀಯ ಸ್ವಯಂಸರ್ಕಾರವಾದ ಗ್ರಾಮ ಪಂಚಾಯತ್‌ನ ಅಧಿಕಾರವನ್ನು ಸಾರಾಸಗಟಾಗಿ ಅಲ್ಲಗಳೆಯುವ ಸರ್ಕಾರದ ಈ ನಿರ್ಧಾರವನ್ನು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ತೀವ್ರವಾಗಿ ಖಂಡಿಸುತ್ತದೆ.**

ಇದಲ್ಲದೇ ಸಚಿವರು ಇನ್ನೂ ಮುಂದುವರಿದು, **'ಆಶ್ರಯ ಮನೆಗಳಿಗೆ ಫಲಾನುಭವಿಗಳ ಪಟ್ಟಿ ತಯಾರಿಸಿದ ಬಳಿಕ ಅದಕ್ಕೆ ಗ್ರಾಮ ಸಭೆಯ ಒಪ್ಪಿಗೆ ಇನ್ನು ಮುಂದೆ ಅಂತಿಮವಲ್ಲ**. ಶಾಸಕರು, **ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್** ಸಿ.ಇ.ಓ, **ತಹಶೀಲ್ದಾರ್, ಪಿ.ಡಿ.ಓ.ಗಳನ್ನು ಒಳಗೊಂಡ ಉಸ್ತುವಾರಿ ಸಮಿತಿ** ರಚಿಸಲಾಗುತ್ತದೆ. ಫಲಾನುಭವಿಗಳ ಪಟ್ಟಿಗೆ ಸಮಿತಿ **ಒಪ್ಪಿಗೆ ಕಡ್ಡಾಯ**. ಫಲಾನುಭವಿಗಳು ಅರ್ಹರೇ, ಅವರಿಗೆ ಮನೆ ದೊರಕಿದೆಯೇ ಎಂಬುದನ್ನು ಖಾತರಿಪಡಿಸುವ ಜವಾಬ್ದಾರಿಯೂ ಸಮಿತಿಯದು' ಎಂದಿದ್ದಾರೆ. ಅಲ್ಲದೇ, 'ಗ್ರಾಮ ಸಭೆಗಳ ಅಧಿಕಾರ ಮೊಟಕು ಮಾಡುತ್ತಿಲ್ಲ. ಆದರೆ, ಯೋಜನೆಯ ಉದ್ದೇಶ ಈಡೇರಬೇಕಾದರೆ ಮೇಲೊಂದು ಉಸ್ತುವಾರಿ ವ್ಯವಸ್ಥೆ ಇರಬೇಕು ಎಂಬುದು ಸರ್ಕಾರದ ಕಳಕಳಿ' ಎಂದೂ ಸಹ ಹೇಳಿದ್ದಾರೆ!

ಪಂಚಾಯತ್‌ಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲವಾಗಲು ಅವುಗಳಿಗೆ ಅವಶ್ಯಕವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಹಕ್ಕುಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಅಧಿಕಾರ ಕೊಟ್ಟಿರುವುದೇ ವಿನಃ, ಅವುಗಳಿಗೆ ಇರುವ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕಲ್ಲ. **ಸ್ವ–ಹಿತಾಸಕ್ತಿಗಾಗಿ, ಅಧಿಕಾರಶಾಹಿ ಆಡಳಿತಕ್ಕಾಗಿ, ಕೇಂದ್ರೀಕೃತ ರಾಜಕೀಯಕ್ಕಾಗಿ ಪ್ರಜಾಪ್ರಭುತ್ವದ ಬೇರಿನ ಸಾರವನ್ನೇ ತಿರುಚಲು ಹೊರಟಂತಹ ಸರ್ಕಾರದ ಈ ನಡೆ ಯಾವುದೇ ಕಾರಣಕ್ಕೂ ಒಪ್ಪತಕ್ಕದ್ದಲ್ಲ.**

2007ರಲ್ಲಿ ಸರ್ಕಾರ ಇದೇ ವಿಷಯದಲ್ಲಿ ಕಾನೂನು ತಿದ್ದುಪಡಿ ಮಾಡುವ ದುಃಸ್ಸಾಹಸಕ್ಕೆ ಕೈಹಾಕಿತ್ತು. ಆಗ ಗ್ರಾಮ ಸಭೆಯ ಪಾರಮ್ಯವನ್ನು ಎತ್ತಿಹಿಡಿದು, ಸ್ಥಳೀಯ ಸರ್ಕಾರವನ್ನು ಬಲಗೊಳಿಸಲು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ರಾಜ್ಯದಾದ್ಯಂತ 5000ಕ್ಕೂ ಮಿಕ್ಕಿ ಗ್ರಾಮ ಪಂಚಾಯತ್ ಹಾಗೂ ಗ್ರಾಮ ಸಭಾ ಸದಸ್ಯರನ್ನು ಒಗ್ಗೂಡಿಸಿ ಸರ್ಕಾರದ ಈ ಕ್ರಮದ ವಿರುದ್ಧ ತೀವ್ರ ಹೋರಾಟ ನಡೆಸಿದ್ದಲ್ಲದೇ ಈ ತಿದ್ದುಪಡಿ ಮಸೂದೆಯನ್ನು ಹಿಂಪಡೆಯಬೇಕೆಂದು ಆಗಿನ ಮಾನ್ಯ ರಾಜ್ಯಪಾಲರಿಗೆ ಮನವಿ ಮಾಡಿತ್ತು. ಇದರಿಂದಾಗಿ ಆಗಿನ ರಾಜ್ಯಪಾಲರಾಗಿದ್ದ ಶ್ರೀ ಟಿ.ಎನ್. ಚತುರ್ವೇದಿಯವರು ಸರ್ಕಾರದ ಆ ತಿದ್ದುಪಡಿಗೆ ಅಂಕಿತ ಹಾಕದೇ ಹಿಂದಕ್ಕೆ ಕಳುಹಿಸಿದ್ದರು ಎಂಬುದನ್ನು ಇಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇವೆ. ಅಲ್ಲದೇ 2016ರಲ್ಲಿ, ಪುನಃ ವಸತಿ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ ಅಂತಿಮಗೊಳಿಸಲು ಶಾಸಕರ ಅಧ್ಯಕ್ಷತೆಯ ಜಾಗೃತ ಸಮಿತಿಗೆ ಅಧಿಕಾರ ಕೊಡುವ ಆದೇಶವನ್ನು ಸರ್ಕಾರ ಹೊರಡಿಸಿದಾಗ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಅಂದಿನ ಸರ್ಕಾರದ ಇಂತಹ ನಡೆಯ ವಿರುದ್ಧ ಕಾನೂನಾತ್ಮ ಹೋರಾಟಕ್ಕೆ ಇಳಿದಾಗ, **ಸಂವಿಧಾನದ 40, 243ಜಿ ವಿಧಿಗಳನ್ನು ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಯ ಪ್ರಕರಣ 3**ಇ ಯಲ್ಲಿರುವ ಅಂಶಗಳನ್ನು ಪರಿಗಣಿಸಿ, ರಾಜ್ಯದ ಗೌರವಾನ್ವಿತ ಉಚ್ಚ ನ್ಯಾಯಾಲಯ ಸರ್ಕಾರ ನೀಡಿರುವ ಸುತ್ತೋಲೆಗಳನ್ನು ಹಾಗೂ ವಸತಿ ಯೋಜನೆಗೆ ಸಂಬಂಧಿಸಿದ ಮಾರ್ಗದರ್ಶಿ ಅಧಿಸೂಚನೆಯನ್ನು 2017ರಲ್ಲಿಯೇ ಮಧ್ಯಂತರ ಆದೇಶ ನೀಡಿ ತಡೆಹಿಡಿದಿದೆ. ಅಲ್ಲದೇ ಸರ್ಕಾರದ ಕಾರ್ಯದರ್ಶಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿಗೆ


***ಸ್ಫೂರ್ತಿದಾತರು:***

**ದಿ. ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀಯ ಯೋಜನಾ ಆಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀಯ ರಾಯಭಾರಿಗಳು

**ದಿ. ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

***ಸಂಯೋಜಕರು:***

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು–560 017
ಫೋನ್: 080–25234270, 25234272, 25234611
ಇ–ಮೇಲ್: cwc@pobox.com
cwcblr@gmail.com
ವೆಬ್: www.theconcernedforworkingchildren.org

ಹಾಗೂ ವಸತಿ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸ್ಪಷ್ಟ ಕಾರಣ ಕೇಳಿ ನೋಟೀಸು ಜಾರಿ ಮಾಡಿದ್ದೂ ಸಹ ತಮ್ಮ ಗಮನಕ್ಕೆ ತರಬಯಸುತ್ತೇವೆ. ಇಷ್ಟಲ್ಲದೇ, ಸ್ಥಳೀಯಾಡಳಿತದಿಂದ ಆಯ್ಕೆಯಾಗಿರುವ ವಿಧಾನಮಂಡಲದ ಸದಸ್ಯರು ಫಲಾನುಭವಿಗಳ ಆಯ್ಕೆಯ ವಿಷಯದ ಗ್ರಾಮ ಸಭೆಯ ಪರಮಾಧಿಕಾರವನ್ನು ಮೊಟಕುಗೊಳಿಸುವಂತಿಲ್ಲ ಎಂದು ಹಲವಾರು ಬಾರಿ ಸದನದಲ್ಲಿ ಬಾವಿಗಿಳಿದು ಸರ್ಕಾರದ ಅಂತಹ ಕ್ರಮವನ್ನು ತೀವ್ರವಾಗಿ ವಿರೋಧಿಸಿದ್ದು ತಮಗೆ ನೆನಪಿರಬಹುದು.

ಇಷ್ಟೆಲ್ಲಾ ಇತಿಹಾಸವಿದ್ದರೂ, ಪುನಃ **ತಮ್ಮ ಸರ್ಕಾರ ಆಶ್ರಯ ಮನೆಗಳ ಹಂಚಿಕೆಯಲ್ಲಿ ವ್ಯಾಪಕವಾಗಿರುವ ಅಕ್ರಮ ಹಾಗೂ ಹಣದ ದುರುಪಯೋಗಕ್ಕೆ ಕಡಿವಾಣ ಹಾಕಬೇಕಾಗಿದೆ ಎಂಬ ನೆಪವೊಡ್ಡಿ ಗ್ರಾಮ ಸಭೆಯ ಪರಮಾಧಿಕಾರವನ್ನೇ ಕಿತ್ತುಕೊಳ್ಳುವ ನಿರ್ಧಾರಕ್ಕೆ** ಮುಂದಾಗಿರುವುದು ಸರಿಯಲ್ಲ. ಪಂಚಾಯತ್ ವ್ಯವಸ್ಥೆ ಸರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಅಗತ್ಯವಾದ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವು ರೂಪಿಸಬೇಕೇ ವಿನಃ ಆ ವ್ಯವಸ್ಥೆಯಲ್ಲಿ ಮೇಲ್–ಸ್ಥರದ ಸರ್ಕಾರವನ್ನು ತೂರಿಸುವುದು ಸರ್ವಥಃ ಸರಿಯಲ್ಲ.

ನಮ್ಮ ದೇಶದ **ಸಂವಿಧಾನದ 40ನೇ ವಿಧಿಯಲ್ಲಿ** ರಾಜ್ಯ ಸರ್ಕಾರಗಳಿಗೆ ಹೇಳಲಾದ ನಿರ್ದೇಶಕ ತತ್ವಗಳಲ್ಲಿ ಹೀಗೆ ಪ್ರಸ್ತಾಪಿಸಿದೆ. 'ಸರ್ಕಾರಗಳು ಗ್ರಾಮ ಪಂಚಾಯತ್‌ಗಳನ್ನು ರಚಿಸಲು ವ್ಯವಸ್ಥೆ ಮಾಡಬೇಕು. ಹಾಗೆ ಸ್ಥಾಪಿಸಿದ ಗ್ರಾಮ ಪಂಚಾಯತ್‌ಗಳು ಸ್ವಾಯತ್ತ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಪೂರಕವಾಗಿ ಅವುಗಳಿಗೆ ಅಗತ್ಯವಾದ ಪರಮಾಧಿಕಾರ, ವಿಧಾಯಕ ಶಕ್ತಿಗಳನ್ನು ಒದಗಿಸಬೇಕು. **ಸಂವಿಧಾನದ 243ಜಿ ವಿಧಿಯಲ್ಲಿ** "ಸ್ವಯಮಾಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಶಕ್ತರಾಗುವಂತೆ ಮಾಡಲು ಪಂಚಾಯತ್‌ಗಳಿಗೆ ಪರಮಾಧಿಕಾರ ನೀಡಿ ಜನರನ್ನು ನೇರವಾಗಿ ತೀರ್ಮಾನವಾಗುವಲ್ಲಿ ಭಾಗವಹಿಸುವಂತೆ ಮಾಡಲು ಅವಕಾಶ ಮಾಡಿಕೊಡುವುದು. ಅಲ್ಲದೇ ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಯಾವುದೇ ಸ್ಕೀಮುಗಳು/ಯೋಜನೆಗಳ ಅನುಷ್ಠಾನದ ಜವಾಬ್ದಾರಿಯನ್ನು ಪಂಚಾಯತ್‌ನ ಘಟಕಗಳಿಗೆ ನೀಡುವುದು" ಎಂದು ಹೇಳಲಾಗಿದೆ. ಇದಕ್ಕೆ ಪೂರಕವಾಗಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ **ಕಾಯಿದೆಯ ಪ್ರಕರಣ 3ಇ** ಹೇಳುವಂತೆ, "ಗ್ರಾಮ ಸಭಾವು, ಗ್ರಾಮ ಪಂಚಾಯತ್‌ನಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಕೇಂದ್ರ, ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲಾ ಸರ್ಕಾರಿ ಸ್ಕೀಮುಗಳನ್ನು ಯೋಜಿಸುವಲ್ಲಿ, ಅನುಷ್ಠಾನಕ್ಕೆ ತರುವಲ್ಲಿ, ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಗ್ರಾಮದ ಎಲ್ಲಾ ನಾಗರಿಕರು ನೇರವಾಗಿ ಭಾಗಿಯಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಗ್ರಾಮ ಸಭಾ, ಗ್ರಾಮ ಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರತಕ್ಕದ್ದು".

ಹೀಗಿರುವಾಗ, **ಸಂವಿಧಾನಾತ್ಮಕವಾಗಿಯಾಗಲೀ, ಕಾನೂನಾತ್ಮಕವಾಗಿಯಾಗಲೀ, ಪ್ರಜಾಪ್ರಭುತ್ವದ ಆಶಯದಂತಗಲೀ, ಸಾಮಾಜಿಕ ನ್ಯಾಯದಡಿಯಲ್ಲಾಗಲೀ, ಮಹಾತ್ಮರ ಕನಸಿನಂತಾಗಲೀ ಹೇಗೇ ನೋಡಿದರೂ ಗ್ರಾಮ ಸಭೆಯ ಹಕ್ಕಾಗಿದ್ದ ಫಲಾನುಭವಿಗಳ ಆಯ್ಕೆಯ ಮತ್ತು ಆ ಪಟ್ಟಿಯನ್ನು ಅಂತಿಮಗೊಳಿಸುವ ಅಧಿಕಾರವನ್ನು ಅಧಿಕಾರಿಗಳ, ಶಾಸಕರ ಹಿಡಿತದಲ್ಲಿರುವ ಜಾಗೃತ ಸಮಿತಿಗೆ ನೀಡಲು ಹೊರಟಿರುವ ತಮ್ಮ ಸರ್ಕಾರದ ನಿರ್ಧಾರ ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಗೇ ಮಾರಕವಾದುದು.** ಇಂತಹ ತಪ್ಪು ನಿರ್ಧಾರಗಳನ್ನು ತಕ್ಷಣವೇ ಹಿಂಪಡೆದು, ಕಾನೂನಾತ್ಮಕವಾಗಿರುವ ಸ್ಥಳೀಯ ಸ್ವಯಂ ಸರ್ಕಾರಗಳಾದ ಗ್ರಾಮ ಪಂಚಾಯತ್‌ಗಳ ಅಧಿಕಾರಗಳನ್ನು ಅವುಗಳಿಗೆ ಹಸ್ತಾಂತರಿಸಿ ಗ್ರಾಮ ಸಭೆಯ ಪಾರಮ್ಯವನ್ನು ಎತ್ತಿಹಿಡಿಯುವತ್ತ ತಮ್ಮ ಸರ್ಕಾರ ಕಾರ್ಯಪ್ರವೃತ್ತವಾಗಬೇಕು. **ಈ ನಿಟ್ಟಿನಲ್ಲಿ, ತಾವು ಕಾಳಜಿಪೂರ್ವಕ ಜವಾಬ್ದಾರಿ ವಹಿಸಿ, ತಮ್ಮ ಮಂತ್ರಿಮಂಡಲದ ಜೊತೆ ಮಾತುಕತೆ ನಡೆಸಿ, ಈ ನಿರ್ಧಾರವನ್ನು ಹಿಂಪಡೆಯುವಲ್ಲಿ ತಾವು ಮಹತ್ತರ ಪಾತ್ರವಹಿಸಬೇಕೆಂದು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಸದಸ್ಯರಾದ ನಾವು ಹಕ್ಕೊತ್ತಾಯ ಮಾಡುತ್ತಿದ್ದೇವೆ.**

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಪರವಾಗಿ